ಮದುವೆಯಾಗಿ ಈ ಮನೆಯಲ್ಲಿ ಹೊಸದಾಗಿ ಸಂಸಾರ ಹೂಡಿದಾಗ ಅವನ ಹೆಂಡತಿ ಮತ್ತು ಎರಡು ವರ್ಷದ ಮಗನ ಜೊತೆ ಬಂದು ಮಾತನಾಡಿಸಿಕೊಂಡು ಹೋಗಿದ್ದ.

ನಾನು ಗೋಲ್ಡನ್ ಗೇಟ್ ಪಬ್ ತಲುಪಿದಾಗ ಅದರ ಎದುರಿನಲ್ಲಿಯೇ ನಿಂತು ಸುಬ್ರಹ್ಮಣ್ಯ ಕಾಯುತಿದ್ದ. ನಾನು ಪಬ್ಬಿನ ಪಾರ್ಕಿಂಗ್ ಸ್ಥಳದಲ್ಲಿ ಕಾರು ನಿಲ್ಲಿಸಿ ಬಂದು 'ಹೇಗಿದ್ದೀಯಾ ಸುಬ್ಬೂ..' ಎಂದು ಯೋಗಕ್ಷೇಮ ವಿಚಾರಿಸಿ ಅವನ ಹೆಗಲ ಮೇಲೆ ಕೈಹಾಕಿಕೊಂಡು ಪಬ್ಬಿನ ಒಳಗೆ ಕರೆ ತಂದೆ. ಇನ್ನೂ ಸಮಯ ಏಳು ಗಂಟೆಯಾಗಿದ್ದರಿಂದ ಪಬ್ಬಿನಲ್ಲಿ ಹೆಚ್ಚು ಜನರಿರಲಿಲ್ಲ. ಮೂಲೆಯೊಂದರ ಟೇಬಲ್ ಆರಿಸಿಕೊಂಡು ತಂಪು ಬಿಯರಿನ ಜೊತೆ ಉರಿದ ಗೋಡಂಬಿಯನ್ನು ಆರ್ಡರ್ ಮಾಡಿ ಎದಿರು ಬದರಾಗಿ ಕುಳಿತೆವು. ಕುಳಿತ ತಕ್ಷಣವೇ ಅವನು ಜೇಬಿನಿಂದ ಸಿಗರೇಟು ತೆಗೆದು ಹಚ್ಚಿದ. ನನಗೆ ಸಿಗರೇಟು ಸೇದುವ ಅಭ್ಯಾಸವಿರಲಿಲ್ಲ.

'ಏನು ಸುಬ್ಬೂ.. ಮನೆಯಲ್ಲಿ ಮಗ, ಮಿಸೆಸ್ಸೂ ಎಲ್ಲಾ ಚೆನ್ನಾಗಿದ್ದೀರಾ..' ಎಂದು ಮಾತು ಪ್ರಾರಂಭಿಸಿದೆ.

'ಎಲ್ಲಾ ಚೆನ್ನಾಗಿದ್ದಾರೆ ಮಾರಾಯ.. ನಿಮ್ಮ ಮಿಸೆಸ್ ಹೇಗಿದ್ದಾರಪ್ಪಾ..' ಎಂದ. 'ಒಕೆ..ಷಿ ಇಸ್ ಫೈನ್..' ಎಂದು ಉಲ್ಲಾಸದಿಂದ ಉದ್ಗರಿಸಿದೆ. ಅವನು ನನ್ನ ಜೊತೆ ಉತ್ಸಾಹದಿಂದಲೇ ಮಾತನಾಡುತ್ತಿದ್ದರೂ ಅವನ ದನಿಯಲ್ಲಿ ಒಂದು ಸಣ್ಣ ಕಳವಳ, ಬೇಸರಗಳು ತುಂಬಿದ್ದು ಯಾಕೆಂದು ತಿಳಿಯಲಿಲ್ಲ.

ಅಷ್ಟರಲ್ಲಿ ಸರ್ವರ್ ಎದುರಿಗೆ ತುಂಬಿಟ್ಟಿದ್ದ ಬಿಯರಿನ ಮಗ್ಗುಗಳನ್ನು ಇಬ್ಬರೂ ಕೈಗೆತ್ತಿಕೊಂಡು ಚಿಯರ್ಸ್ ಹೇಳಿ ತುಟಿಗಿಟ್ಟೆವು.

'ಏನ್ ಸುಬ್ಬೂ.. ಇದ್ದಕ್ಕಿದ್ದಂತೆ ಬೆಂಗಳೂರಿಗೆ ಬಂದಿದ್ದೀಯಾ..' ಎಂದು ಮಾತು ಮುಂದುವರಿಸಿದೆ.

'ಹೇ ಸುನಿಲ್.. ಗಿರಿಧರ ಅಂತ ನಮ್ಮ ಚಿಕ್ಕಮ್ಮನ ಮಗನನ್ನ ನಿನ್ನನ್ನ ಭೇಟಿಯಾಗು ಅಂತ ಹೇಳಿ ಕಳುಹಿಸಿದ್ದೆ.. ಬಂದಿದ್ದನಾ..?' ಎಂದು ಕುತೂಹಲದಿಂದ ಪ್ರಶ್ನಿಸಿ ನನ್ನ ಮುಖವನ್ನೇ ನೋಡಿದ. ಅಯ್ಯೋ ದೇವರೇ.. ಈ ಗಿರಿಧರ ಎನ್ನುವ ಆಗಂತುಕ ಇವನು ಕಳುಹಿಸಿದ ಮನುಷ್ಯನೇ..? ನಾನು ಏನೇನೋ ಯೋಚಿಸಿಕೊಂಡಿದ್ದನಲ್ಲಾ.. ಎಂದುಕೊಂಡು ತಟ್ಟನೆ ಒಂದು ಸಣ್ಣ ಆಘಾತವಾದಂತಾಯಿತು. ಅದನ್ನು ಅವನೆದುರು ತೋರಿಸಿಕೊಳ್ಳದೆ,

'ಹೌದು ಮಾರಾಯ.. ಎರಡು ಮೂರು ಬಾರಿ ಮನೆಯ ಹತ್ತಿರ ಬಂದಿದ್ದನಂತೆ.. ಆದರೆ ಒಂದು ಬಾರಿಯೂ ನೀನು ಕಳುಹಿಸಿದ್ದು ಎಂದಾಗಲೀ, ಬಂದ ವಿಷಯವೇನೆಂದಾಗಲೀ ಹೇಳೇ ಇಲ್ಲ ನೋಡು..' ಎಂದು ವಿಷಾದದಿಂದ ಉತ್ತರಿಸಿದೆ.

ಅವನು ಚಿಕ್ಕಹುಡುಗನಿಂದಲೂ ಒಂಥರಾ ಸಂಕೋಚದ ಪ್ರಾಣಿ ಕಣೋ.. ಮೂಕಬಸವ ಇದ್ದ ಹಾಗೆ. ಯಾರ ಹತ್ತಿರವೂ ಮನಸ್ಸು ಬಿಚ್ಚಿ ಮಾತನಾಡುವುದೇ ಇಲ್ಲ.. ಆದ್ರೆ ತುಂಬಾ ಇಂಟೆಲಿಜೆಂಟ್ ಫೆಲೋ.. ಎಂ.ಕಾಂ. ಮಾಡಿಕೊಂಡಿದ್ದಾನೆ. ಕೆಲಸ ಹುಡುಕ್ತಾ ಇದ್ದಾ.. ಬಾಯೇ ಬಿಡದವರು ಈ ಪ್ರಪಂಚದಲ್ಲಿ ಉದ್ಧಾರವಾಗೋದು ಸಾಧ್ಯಾನಾ..? ಅದಕ್ಕೆ ನೀನು ಪರ್ಚೇಸ್ ಡಿಪಾರ್ಟ್‌ಮೆಂಟಿನಲ್ಲಿದ್ದೀಯಲ್ಲಾ.. ತುಂಬಾ ಕಂಪೆನಿಯವರು ಗೊತ್ತಿರ್ತಾರೆ.. ನಿನಗಿರೋ ಕಾಂಟ್ಯಾಕ್ಟ್‌ನಲ್ಲಿ ಏನಾದ್ರೂ ಸಹಾಯ ಮಾಡ್ತೀಯಾ.. ಯಾವುದಾದ್ರೂ ಸಣ್ಣ ಫ್ಯಾಕ್ಟರಿಯಲ್ಲಿ ಅಕೌಂಟೆಂಟ್ ಕೆಲಸ ಕೊಡಿಸ್ತೀಯಾ ಅಂದುಕೊಂಡು ಅವನಿಗೆ ನಿನ್ನ ಫೋನು ನಂಬರ್, ಮನೆ ಅಡ್ರೆಸ್ಸು ಹೇಳಿ ಕಳುಹಿಸಿದ್ದೆ.. ನಾನು ಹೋಗಿದ್ದೇನೋ ಎಂದು ಕೇಳಿದ್ರೆ ಹೋಗಿದ್ದೆ ಅವರು ಸಿಗಲಿಲ್ಲ ಎನ್ನುತಿದ್ದ.. ಅದಕ್ಕೆ ನಾನೇ ನಿನಗೆ ವಿಷಯ ತಿಳಿಸೋಣ ಅಂತ ಕಾಲ್ ಮಾಡ್ದೆ.. ನೀನು ಬ್ಯುಸಿಯಾಗಿದ್ದೆ ಅಂತ ಕಾಣಿಸುತ್ತೆ..' ಎಂದು ವಿವರವಾಗಿ ತಿಳಿಸಿದ.

'ಸಾರಿ ಸುಬ್ಬೂ.. ನಾನು ಸ್ವಲ್ಪ ಬ್ಯುಸಿಯಾಗಿದ್ದೆ.. ಅವನ ಫೋನು ನಂಬರ್ ಕೊಡು.. ನಾಳೆನೇ ಅವನ ಹತ್ತಿರ ಮಾತನಾಡಿ ಯಾವುದಾದ್ರೂ ನಮ್ಮ ಸಪ್ಲೇಯರ್ಸ್ ಫ್ಯಾಕ್ಟರಿಯಲ್ಲಿ ವಿಚಾರಿಸಿ ಸದ್ಯಕ್ಕೆ ಒಂದು ಕೆಲಸ ಕೊಡಿಸ್ತೀನಿ..' ಎಂದು ಅಲವತ್ತುಕೊಂಡೆ.

'ಅವನೆಲ್ಲಿದಾನೆ ಇಲ್ಲಿ..? ಅವನು ನಾಪತ್ತೆಯಾಗಿ ಆಗಲೇ ಒಂದು ವಾರ ಆಯ್ತು, ಎಲ್ಲಿದಾನೆ ಅಂತ ಯಾರಿಗೂ ಗೊತ್ತಿಲ್ಲಾ. ಅದಕ್ಕೆ ಈವತ್ತು ಬೆಳಿಗ್ಗೆ ಹೈದರಾಬಾದಿನಿಂದ ಬಂದು ಮಳವಳ್ಳಿಗೆ ಹೋಗಿ ನಮ್ಮ ಚಿಕ್ಕಮ್ಮನ್ನ ಮಾತನಾಡಿಸಿ ಸಮಾಧಾನ ಹೇಳಿ ಬಂದೆ..' ಎಂದು ಅವನು ಆತಂಕದಿಂದ ನುಡಿದದ್ದನ್ನು ಕಂಡು ನನಗೆ ತೀವ್ರ ದಿಗಿಲಾಗಿ,

'ಅರೆ! ಅವನಿಗೇನಾಯ್ತು ಸುಬ್ಬೂ ನಾಪತ್ತೆಯಾಗೋ ಅಂತಹುದು..' ಕೊಂಚ ಆತಂಕ, ಕುತೂಹಲಗಳಿಂದಲೇ ಪ್ರಶ್ನಿಸಿದೆ. ಅವನು ಇನ್ನೊಂದು ಸಿಗರೇಟು ಹಚ್ಚಿ ಅದೊಂದು ದೊಡ್ಡ ಕತೆ ಮಾರಾಯ.. ಎಂದು ನಿಗೂಢವಾಗಿ ನುಡಿದ. ನಾನು ಮಗ್ಗಿನಲ್ಲಿದ್ದ ಬಿಯರನ್ನು ಕುಡಿಯುತ್ತಲೇ ಅವನ ಮುಂದಿನ ಮಾತನ್ನು ನಿರೀಕ್ಷಿಸಿದೆ. ಅವನು ಸಿಗರೇಟಿನ ಹೊಗೆಯನ್ನು ಮೇಲಕ್ಕೆ ಬಿಟ್ಟು ನಿಧಾನವಾಗಿ ನುಡಿದ.

'ಹೇಮಾವತಿ ಅನ್ನೋ ಒಬ್ಬ ಹುಡುಗಿಯನ್ನ ಪ್ರೀತಿಸಿ ಅವನು ಹಾಳಾಗಿ ಹೋದ..' ಕುಡಿಯುತ್ತಿದ್ದ ಬಿಯರ್ ನೆತ್ತಿಗೇರಿ ನಾನು ಒಂದೇ ಸಮನೆ ಕೆಮ್ಮತೊಡಗಿದೆ. 'ಏನಾಯ್ತೋ ಸುನಿಲ್.. ಸ್ವಲ್ಪ ನಿಧಾನ..' ಎಂದು ಅವನು ಸಂತೈಸಿದ. ಒಂದು ನಿಮಿಷ ಬಂದೆ.. ಎಂದು ಎದ್ದವನು ವಾಷ್‌ಬೇಸಿನ್ ಬಳಿಗೆ ನಡೆದು ಪಕ್ಕದ ಗೋಡೆಗೊರಗಿ ನಿಂತು ದೀರ್ಘವಾಗಿ ಉಸಿರೆಳೆದುಕೊಂಡು ಸಾವರಿಸಿಕೊಂಡೆ. ಮುಖಕ್ಕೆ ನೀರು ಎರಚಿಕೊಂಡು ನ್ಯಾಪ್‌ಕಿನ್‌ನಲ್ಲಿ ಒರೆಸಿಕೊಂಡು ಬಂದು ಅವನ ಎದುರಿಗೆ ಕುಳಿತೆ. 'ಆರ್ ಯೂ ಆಲ್ ರೈಟ್ ಸುನಿಲ್..' ಎಂದು ಕಾಳಜಿ ತೋರಿದ. 'ನೋ ಪ್ರಾಬ್ಲೆಮ್..' ಎಂದು ಹುಸಿ ಮುಗುಳ್ನಗೆ ನಕ್ಕು ಬಿಯರಿನ ಮಗ್ಗನ್ನು ಕೈಗೆತ್ತಿಕೊಂಡೆ. ಅವನು ಮುಂದುವರೆಸಿದ.

'ನಮ್ಮ ಚಿಕ್ಕಮ್ಮ ಅಂದರೆ ನಮ್ಮ ತಾಯಿಯ ತಂಗಿ. ಅವರನ್ನ ಕಂಡರೆ ನನಗೆ ಚಿಕ್ಕಹುಡುಗನಿದ್ದಾಗಲಿಂದಲೂ ತುಂಬಾ ಇಷ್ಟ. ನಾನು ಆಗೆಲ್ಲಾ ಬೇಸಿಗೆ ರಜೆ, ದಸರಾ ರಜೆ ಇದ್ದಾಗಲೆಲ್ಲಾ ಬಹಳಷ್ಟು ಸರ್ತಿ ಮಳವಳ್ಳಿಗೆ ಹೋಗಿ ಅವರ ಮನೆಯಲ್ಲಿ ಇದ್ದು ಬರುತ್ತಿದ್ದೆ. ಈ ಗಿರಿಧರ ಅವರ ಒಬ್ಬನೇ ಮಗ. ನಮ್ಮ ಚಿಕ್ಕಪ್ಪ ಅವನು ಎರಡನೇ ಕ್ಲಾಸು ಇದ್ದಾಗಲೇ ತೀರಿಕೊಂಡರು. ನಮ್ಮ ಚಿಕ್ಕಮ್ಮ ಇವನನ್ನ ಬಹಳ ಜೋಪಾನ ಮಾಡಿ ಸಾಕಿದ್ರು. ಮನೆಯ ಕಡೆ ಫೈನಾನ್ಸಿಯಲೀ ಚೆನ್ನಾಗಿದಾರೆ. ಮಳವಳ್ಳಿನಲ್ಲಿ ಅವರದ್ದು ಒಂದು ಹಾರ್ಡ್‌ವೇರ್ ಅಂಗಡಿಯಿದೆ. ತೋಟ, ಗದ್ದೆಗಳ ಜೊತೆ ಮೂರ್ನಾಲ್ಕು ಬಾಡಿಗೆ ಬರೋ ಮನೆಗಳಿವೆ. ಇವನಿಗೇನೂ ಕೆಲಸದ ಅವಶ್ಯಕತೆಯೇನೂ ಇರಲಿಲ್ಲ..' ಎಂದು ನಿಟ್ಟುಸಿರುಬಿಟ್ಟು ಮಗ್ಗಿನಲ್ಲಿದ್ದ ಬಿಯರನ್ನು ಗುಟುಕರಿಸಿ ಕೆಳಗೆ ಇಟ್ಟ.

'ಆ ಹೇಮಾವತಿ ಅನ್ನೋ ಹುಡುಗಿಯನ್ನ ಚಿಕ್ಕವಳಿದ್ದಾಗ ನಾನೂ ನೋಡಿದ್ದೆ. ತುಂಬಾ ಬ್ಯೂಟಿಫುಲ್ ಮತ್ತು ಅಷ್ಟೇ ಒಳ್ಳೆಯ ಹುಡುಗಿ. ನಮ್ಮ ಚಿಕ್ಕಪ್ಪನ ಕಡೆಯ ದೂರದ ಸಂಬಂಧಿಕರ ಮಗಳು. ನಮ್ಮ ಗಿರಿಧರನೂ ನೋಡೋದಿಕ್ಕೆ ಚೆನ್ನಾಗಿದಾನೆ. ನಾನೂ ನೀನೂ ಅವನ ಮುಂದೆ ಏನೂ ಅಲ್ಲ ನೋಡು.. ಒಳ್ಳೇ ಫಿಲ್ಮ್ ಸ್ಟಾರ್ ಇದ್ದಂಗಿದಾನೆ. ನಮ್ಮ ಚಿಕ್ಕಮ್ಮನಿಗೆ ಇವನು ಜಾಸ್ತಿ ಓದಿ ಊರು ಬಿಟ್ಟು ಹೋಗೋದು ಇಷ್ಟ ಇರಲಿಲ್ಲ. ಇರೋನು ಒಬ್ಬನೇ ಮಗ.. ನಾನು ಒಬ್ಬಂಟಿ ಹೆಂಗಸು.. ಇರೋ ಆಸ್ತೀನ ಇವನು ಉಳಿಸಿಕೊಂಡು ಹೋದ್ರೆ ಸಾಕು ಅಂದುಕೊಂಡು ಅವನನ್ನ ಮೈಸೂರಿನಲ್ಲಿ ಬಿ.ಕಾಂಗೆ ಸೇರಿಸಿದ್ರು. ಬಿ.ಕಾಂ ಫಸ್ಟ್ ಕ್ಲಾಸಿನಲ್ಲಿ ಪಾಸಾದ.. ಎಂ.ಕಾಂಗೂ ಮೈಸೂರಿನಲ್ಲೇ ಸೇರಿಕೊಂಡ..' ಎಂದು ನಿಲ್ಲಿಸಿ ನನ್ನ ಕುತೂಹಲವನ್ನು ಕೆರಳಿಸಿ ಸಿಗರೇಟು ಹಚ್ಚಿದ. ನಾನು ತುಸು ಸಹನೆ ತೆಗೆದುಕೊಂಡು ಮಾತನಾಡದೆ ಕುಳಿತೆ.

ಈ ಹೇಮಾವತಿ ಪಿಯುಸಿನಲ್ಲಿ ಅವನ ಕ್ಲಾಸ್‌ಮೇಟ್.. ಅವಳೂ ಇವರ ಮನೆಗೆ ಯಾವಾಗಲಾದ್ರೂ ಒಂದೊಂದು ಸರ್ತಿ ಬರ್ತಾ ಇದ್ದಳಂತೆ.. ಆವಾಗಿನಿಂದಲೇ ಇವನಿಗೆ ಅವಳ ಮೇಲೆ ಅಟ್ರಾಕ್ಷನ್ ಶುರುವಾಗಿದೆ. ಮೈಸೂರಿನಿಂದ ಬಂದಾಗಲೆಲ್ಲಾ ಒಂದು ಸರ್ತಿ ಅವರ ಮನೆಗೆ ಹೋಗುವುದು, ಸುಮ್ಮನೆ ಕುಳಿತಿದ್ದು ಕಾಫಿ ಕುಡಿದು ಬರುವುದು ಮಾಡುತ್ತಿದ್ದನಂತೆ. ಆಮೇಲೆ ಅವಳನ್ನ ತುಂಬಾ ಹಚ್ಚಿಕೊಂಡು ಬಿಟ್ಟಿದಾನೆ. ಆದ್ರೆ ಈ ವಿಷಯವನ್ನ ಅವಳಿಗೂ ಹೇಳಿಲ್ಲ, ನಮ್ಮ ಚಿಕ್ಕಮ್ಮನ ಹತ್ತಿರವೂ ಹೇಳಿಲ್ಲ. ಆ ಹುಡುಗಿ ಮನೆಯ ಕಡೆ ಬಡತನ. ಅವಳು ಪಿಯುಸಿಗೆ ಓದು ನಿಲ್ಲಿಸಿ ಇಲ್ಲೇ ಯಾವುದೋ ಗಾರ್ಮೆಂಟ್ಸ್‌ಗೆ ಸೇರಿಕೊಂಡು ಆಮೇಲೇನಾಯ್ತೋ ಏನೋ ಕೆಲಸ ಬಿಟ್ಟು ಬಂದು ಮಳವಳ್ಳಿಯಲ್ಲೇ ಇದ್ದಳಂತೆ.. ನಾನು ಅವನ ಮುಖವನ್ನು ದಿಟ್ಟಿಸಲಾಗದೆ ಕಣ್ಣುಮುಚ್ಚಿಕೊಂಡು ಬಿಯರ್ ಕುಡಿಯತೊಡಗಿದೆ.

**(ಸಶೇಷ)**